**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 47/2024**

ಪಿ.ಡಬ್ಲುಃ 1 ಸಿಡಬ್ಲುಃ1

| | | |
|---|---|---|
| ಸಾಕ್ಷಿಯ ಹೆಸರು | : | ಚನ್ನವೀರಪ್ಪ |
| ತಂದೆಯ ಹೆಸರು | : | ಎಸ್ ಬಸವರಾಜಪ್ಪ |
| ವಯಸ್ಸು | : | 61 ವರ್ಷ |
| ವೃತ್ತಿ | : | ಕಿರಾಣಿ ವ್ಯಾಪಾರ |
| ವಾಸಸ್ಥಳ | : | ಎತ್ತಿನ ಬೂದಿಹಾಳ್ |

ಸತ್ಯಪ್ರತಿಜ್ಞೆ ಮಾಡಿದ ದಿನಾಂಕಃ 02.08.2025

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಚಾಸಾ-13 ಇವರು ನನ್ನ ಹೆಂಡತಿ. ಚಾಸಾ-14 ಇವರು ನನ್ನ ಮಗ. ನನಗೆ ಚಾಸಾ-6 ಇವರ ಪರಿಚಯ ಇದೆ. ನನಗೆ ಚಾಸಾ-10 ರಿಂದ 12 ಇವರ ಪರಿಚಯ ಇದೆ ಅವರು ನಮ್ಮ ಊರಿನವರು. ಹಾಜರಿರುವ 1 ರಿಂದ 5 ನೇ ಆರೋಪಿತರ ಪರಿಚಯ ಇದೆ. ಅವರ ಹೆಸರು 1) ಬಸವರಾಜ 2) ಯರಿಸ್ವಾಮಿ 3) ಗೋವಿಂದ 4) ಮೂರ್ತಿ 5) ರಾಜಾ. ನನಗೆ ಮೂರು ಜನ ಮಕ್ಕಳು. ನನಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಮಗಳು ಇರುತ್ತಾಳೆ. ನನ್ನ ಇನ್ನೊಬ್ಬ ಮಗನ ಹೆಸರು ವಿಜಯಕುಮಾರ ಮಗಳ ಹೆಸರು ಪಾರ್ವತಿ. ನನ್ನ ಮಗಳು ಒಂದು ವರೆ ವರ್ಷದ ಹಿಂದೆ ಮರಣ ಹೊಂದಿರುತ್ತಾಳೆ. ನನ್ನ ಮಗಳು ಮರಣ ಹೊಂದಿದಾಗ ಅವಳಿಗೆ 15 ವರ್ಷ ವಯಸ್ಸಾಗಿತ್ತು. ನನ್ನ ಮಗಳು ಬಳ್ಳಾರಿಯ ಮಾಡೆಲ್ ಫ್ಲಬ್ಲಿಕ್ ಸ್ಕೂಲಿನಲ್ಲಿ ಹತ್ತನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು. ಅವಳು ನಮ್ಮ ಊರಿನಿಂದ ಸ್ಕೂಲ್ ಬಸ್ ನಲ್ಲಿ ಶಾಲೆಗೆ ಹೋಗಿ ಬರುತ್ತಿದ್ದಳು.

ದಿನಾಂಕ 24.02.2024 ರಂದು ರಾತ್ರಿ 08.45-09.00 ಗಂಟೆಗೆ ಹಾಜರಿರುವ ಆರೋಪಿತರೆಲ್ಲರು ನಮ್ಮ ಮನೆಯ ಹತ್ತಿರ ಪೆದ್ದಮ್ಮವ್ವ ದೇವಸ್ಥಾನದಿಂದ ನನ್ನ ಮಗಳನ್ನು ಕಿಡ್ನಾಪ್ ಮಾಡಿಕೊಂಡು ಹೋಗಿದ್ದರು. ಆ ದಿವಸ ಭಾರತ ಹುಣ್ವೆ ಇತ್ತು. ಆ ದಿವಸ ನನ್ನ ಅಂಗಡಿಯಲ್ಲಿ ಬಹಳ ವ್ಯಾಪಾರವಿತ್ತು. ಆ ನಂತರ 08 ಗಂಟೆಯ ಮೇಲೆ ಮನೆಗೆ ಬಂದು ಸ್ನಾನ

ಮಾಡಿ ದೇವರ ದರುಶನಕ್ಕೆ ಹೋದೆವು. ದರುಶನ ಮುಗಿಸಿ ಮನೆಗೆ ಬಂದ ನಂತರ ಮನೆಯಲ್ಲಿ ನನ್ನ ಮಗಳು ಇರಲಿಲ್ಲ. ಆದ ಕಾರಣ ಅಕ್ಕ ಪಕ್ಕ ಮನೆಯಲ್ಲಿ ವಿಚಾರಣೆ ಮಾಡಿ ಮತ್ತೆ ಪೆದ್ದಮ್ಮವ್ವ ದೇವಸ್ಥಾನದ ಹತ್ತಿರ ಹೋದಾಗ ಹಲಕುಂದಿ ಮಾರಣ್ಣ, ಹಳ್ಳಿ ಮಾರೆಣ್ಣ ದಾದಾಖಲಂದರ್, ನಂದಿಸ್ವಾಮಿ ಹಾಗೂ ಸುಭಾಷ್ ಚಂದ್ರ ಬೋಸ್ ಇವರೆಲ್ಲರು ಇದ್ದರು. ಅಲ್ಲಿಗೆ ಹೋಗಿ ವಿಚಾರಣೆ ಮಾಡಿದಾಗ ನಾಗರಾಜನ ಮಗ ಬಸವರಾಜ ಅವರ ಅಣ್ಣ ಎರಿಸ್ವಾಮಿ ಹಾಗೂ ಅವರ ಸಂಗಡಿಗರು ಬಲತ್ಕಾರವಾಗಿ ನನ್ನ ಮಗಳನು ಪಾರ್ವತಿಯನ್ನು ಎರಡು ಹೀರೋ ಹೋಂಡಾ ವಾಹನಗಳ ಮೇಲೆ ಕರೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು.

ವಿಷಯ ಗೊತ್ತಾದದ ನಂತರ ಅಕ್ಕಪಕ್ಕ ವಿಚಾರ ಮಾಡಿ ಬಳ್ಳಾರಿಗೆ ಬಂದೆವು. ಬಳ್ಳಾರಿಗೆ ಬಂದು ರೈಲ್ವೆ ಸ್ಟೇಷನ್ ಬಸ್ಟ್ಯಾಂಡ್ ಅಲ್ಲಿ ಎಲ್ಲಾ ಹುಡುಕಲಾಗಿ ಅವಳು ಎಲ್ಲಿಯೂ ಸಿಗಲಿಲ್ಲ. ಶನಿವಾರ ರಾತ್ರಿ **01.00-01.30** ಗಂಟೆಗೆ ಮರಳಿ ಮನೆಗೆ ಬಂದೆವು. ಬಂದ ನಂತರ ವಿಚಾರ ಮಾಡಿ ಬೇರೆ ಕಡೆ ಹುಡುಕಲು ಹೋಗಬೇಕೆಂದು ವಿಚಾರ ಮಾಡಿದೆವು. ಅಷ್ಟರಲ್ಲಿ ಮಧ್ಯ ರಾತ್ರಿ **01.30-02.00** ಗಂಟೆ ಸುಮಾರಿಗೆ ಹೊರಗಿನಿಂದ ಒಂದು ಮೋಟಾರ್ ಸೈಕಲ್ ಬಂದ ಶಬ್ದ ಕೇಳಿಸಿತು. ನಂತರ ಹೊರಗೆ ನೋಡಲಾಗಿ ಹಾಜರಿರು ಆರೋಪಿತರೆಲ್ಲರು ನನ್ನ ಮಗಳನ್ನು ಗಾಡಿಯ ಮೇಲೆ ತಂದು ಬಿಟ್ಟು ಹೋದರು. ನಾವೆಲ್ಲರು ನಮ್ಮ ಮಗಳಿಗೆ ಸಮಾಧಾನ ಮಾಡಿ ಸುಮ್ಮನೆ ಇದ್ದೆವು. ರವಿವಾರ ಹಾಗು ಸೋಮುವಾರ ನನ್ನ ಮಗಳು ಈ ರೀತಿ ಆಯಿತಲ್ಲಾ, ನಮ್ಮ ಮರ್ಯಾದೆ ಹೋಯಿತು ಎಂದು ಅಳುತ್ತಾ ಇದ್ದಳು. ಅವರು ಎರಡು ದಿವಸ ಆದರೂ ಊಟ ಮಾಡಿಲ್ಲ ಮತ್ತು ನೀರು ಕುಡಿದಿಲ್ಲ. ಮತ್ತೆ ಮಂಗಳವಾರ ದಿನಾಂಕ **20.07.2024** ರಂದು ಮಧ್ಯಾನ **03.00** ಗಂಟೆಗೆ ಅವಳನ್ನು ಸಮಾಧಾನ ಮಾಡಿ ಅವಳು ಮಲಗಿಕೊಂಡಿದ್ದಳು. ನಾನು ಅಂಗಡಿಗೆ ಹೋದೆ. ಆಗ ನನ್ನ ಹೆಂಡತಿ ಬಟ್ಟೆ ಹೊಗೆಯಲು ಹೊರಗಡೆ ಹೋಗಿದ್ದಳು. ನಂತರ ನನ್ನ ಮಗಳು ಬಟ್ಟೆ ತೆಗೆದುಕೊಂಡು ಸ್ನಾನ ಮಾಡುತ್ತೇನೆ ಎಂದು ಬಚ್ಚಲು ಮನೆಗೆ ಹೋದಳು. ಬಚ್ಚಲು ಮನೆಯಲ್ಲಿ ಮೂರು ನಾಲ್ಕು ವರ್ಷಗಳಿಗಳಿಂದ ಸೀಮೆ ಎಣ್ಣೆಯ **5** ಲೀಟರ್ ಡಬ್ಬಿ ಇತ್ತು. ಬಚ್ಚಲು ಮನೆಯ ಚಿಲಕ ಹಾಕಿಕೊಂಡು ಸೀಮೆ ಎಣ್ಣೆಯನ್ನು ಮೈ ಮೇಲೆ ಸುರಿದುಕೊಂಡು ನನ್ನ ಮಗಳು ಬೆಂಕಿ ಹಚ್ಚಿಕೊಂಡಿದ್ದಳು.

ಅವಳ ಚೀರಾಟ ಕೇಳಿ ಹೊರಗಿದ್ದ ಜನರೆಲ್ಲಾ ಒಳಗೆ ಬಂದು ನನ್ನ ಮಗಳನ್ನು ಹೊರಗೆ ಕರೆದುಕೊಂಡು ಬಂದರು. ನಾನು ಅಂಗಡಿಯಿಂದ ಮನೆಗೆ ಬರುವಷ್ಟರಲ್ಲಿ ಅವಳ ದೇಹ 90% ದಷ್ಟು ಸುಟ್ಟು ಹೋಗಿತ್ತು. ನಾನು ತಕ್ಷಣವೇ ನಮ್ಮ ಊರಿನಲ್ಲಿ ನೂರ್ ಬಾಷಾ ಇವರ ಟ್ಯಾಕ್ಸಿಯಲ್ಲಿ ನನ್ನ ಮಗಳನ್ನು ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಹೋದ ನಂರ ಅಲ್ಲಿನ ವೈದ್ಯರು ನನ್ನ ಮಗಳಿಗೆ ಚಿಕಿತ್ಸೆ ನೀಡಿ ಅವಳ ದೇಹ 90% ದಷ್ಟು ಸುಟ್ಟು ಹೋಗಿದೆ ಎಲ್ಲಿ ಹೋದರು ಬದುಕುವ ಸಾಧ್ಯತೆಗಳಿಲ್ಲ ಎಂದು ಹೇಳಿದ್ದರು. ನಂತರ ಅವರು ವಾರ್ಡ ಗೆ ಶಿಫ್ಟ ಮಾಡಿದ್ದರು. ಅಲ್ಲಿ ಮಹಿಳಾ ಪೊಲೀಸ್ ಠಾಣೆಯ ಸರ್ ಕೂಡ ಪರಿಶೀಲಿಸಲು ಬಂದಿದ್ದರು. ಅವರು ನನ್ನ ಮಗಳಿಗೆ ಹೀಗೆಕೆ ಮಾಡಿಕೊಂಡಿದ್ದಿ ಎಂದು ಕೇಳಿದಾಗ ನಮ್ಮ ತಂದೆ ತಾಯಿ ಮರ್ಯಾದೆ ಹೋಗುತ್ತದೆ ಎಂದು ಹೀಗೆ ಮಾಡಿಕೊಂಡಿದ್ದೇನೆ ಎಂದು ಅವರಿಗೆ ಹೇಳಿದ್ದಳು. ನಂತರ ರಾತ್ರಿ 02.15 ಗಂಟೆಗೆ ನನ್ನ ಮಗಳು ಮರಣ ಹೊಂದಿರುತ್ತಾಳೆ.

ನನ್ನ ಮಗಳು ಮರಣ ಹೊಂದಿದ ಬಗ್ಗೆ ಮಹಿಳಾ ಪೊಲೀಸ್ ಠಾಣೆಯ ಸಾರ್ ಇವರಿಗೆ ಎಲ್ಲಾ ಆರೋಪಿತರ ಮೇಲೆ ವರದಿಯನ್ನು ಬರವಣಿಗೆ ಮೂಲಕ ಸಲ್ಲಿಸಿರುತ್ತೇನೆ. ನಾನು ನೀಡಿದ ದೂರನ್ನು ನೊಡುತ್ತಿದ್ದು ಅದನ್ನು ನಿಪಿ-1 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನ್ನ ಸಹಿಯ ಕೆಳಗೆ ಬರೆದಿರುವ ದೂರವಾಣಿ ಸಂಖ್ಯೆ ನನ್ನದೇ ಇರುತ್ತದೆ. ನಮ್ಮ ಮನೆಯಲ್ಲಿದ್ದ ಸೀಮೆ ಎಣ್ಣೆಯ ಡಬ್ಬಿಯನ್ನು ಮತ್ತು ಬೆಂಕಿ ಪೊಟ್ಟಣವನ್ನು ನೋಡಿದಲ್ಲಿ ಗುರುತಿಸುತ್ತೇನೆ.

ಈ ಹಂತದಲ್ಲಿ ಸಾರ್ವಜನಿಕ ಅಭಿಯೋಜಕರು ತೆರೆದ ನ್ಯಾಯಾಲಯದಲ್ಲಿ ಎರಡು ಸೀಲ್ ಮಾಡಿದ ಬಟ್ಟೆಯ ಕವರಗಳನ್ನು ತೆರೆಯಲು ಅನುಮತಿಕೋರುತ್ತಾರೆ. ಅನುಮತಿಯನ್ನು ನೀಡಲಾಯಿತು.

ಈ ಹಂತದಲ್ಲಿ ತೆರೆದ ನ್ಯಾಯಾಲಯದಲ್ಲಿ ಎರಡು ಸೀಲ್ ಮಾಡಿದ ಬಟ್ಟೆಯ ಕವರನ್ನು ತೆರೆಯಲಾಗಿ ಒಂದು ಕವರನಲ್ಲಿ ಸೀಮೆ ಎಣ್ಣೆಯ ಡಬ್ಬ ಇದ್ದು ಅದು ನಮ್ಮ ಮನೆಯಲ್ಲಿದ್ದ ಡಬ್ಬಿ ಎಂದು ಸಾಕಿ ಗುರುತಿಸುತ್ತಾರೆ. ಸೀಮೆ ಎಣ್ಣೆಯ ಡಬ್ಬಿಯನ್ನು ಮುಮಾ-1 ಎಂದು ಗುರುತಿಸಲಾಯಿತು. ಇನ್ನೊಂದು ಕವರನಲ್ಲಿ ಬೆಂಕಿಪೊಟ್ಟಣ ಇದ್ದು ಅದು ನನ್ನ ಮಗಳು ಬೆಂಕಿ

ಹಚ್ಚಿಕೊಳ್ಳಲು ಉಪಯೋಗಿಸಿದ ಬೆಂಕಿಪೊಟ್ಟಣ ಎಂದು ಸಾಕ್ಷಿ ಗುರುತಿಸಿರುತ್ತಾರೆ. ಬೆಂಕಿ ಪೊಟ್ಟಣವನ್ನು ಮುಮಾ-2 ಎಂದು ಗುರುತಿಸಲಾಯಿತು.

ಈ ಹಂತರದಲ್ಲಿ ಇನ್ನೊಂದು ಸೀಲ್ ಮಾಡಿದ ಬಟ್ಟೆ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿ ಅದರಲ್ಲಿ ನನ್ನ ಮಗಳು ಧರಿಸಿದ ಸುಟ್ಟ ಬಟ್ಟೆಯ ತುಂಡು ಇರುವುದನ್ನು ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ಮುಮಾ-3 ಎಂದು ಗುರುತಿಸಲಾಯಿತು.

ನಾನು ದೂರನ್ನು ನೀಡಿದ ನಂತರ ಪೊಲೀಸರು ಬಂದು ಪೆದ್ದಮ್ಮವ್ವನ ದೇವಸ್ಥಾನದ ಹತ್ತಿರ ಪಂಚನಾಮೆ ಮಾಡಿರುತ್ತಾರೆ. ಇನ್ನೊಂದು ಪಂಚನಾಮೆಯನ್ನು ನಮ್ಮ ಮನೆಯ ಹತ್ತಿರ ಮಾಡಿರುತ್ತಾರೆ. ಪೆದ್ದಮ್ಮವ್ವನ ದೇವಸ್ಥಾನದ ಹತ್ತಿರ ಮಾಡಿದ ಪಂಚನಾಮೆಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮನೆಯ ಹತ್ತಿರ ಮಾಡಿದ ಪಂಚನಾಮೆಯನ್ನು ಈ ನೋಡುತ್ತಿದ್ದು ಅದನ್ನು ನಿಪಿ-3 ಹಾಗೂ ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸರು ಮನೆಯ ಹತ್ತಿರ ತೆಗೆದ ಕಚ್ಚಾ ನಕ್ಷೆಯನ್ನು ಈಗ ನೋಡಿ ಗುರುತಿಸಿದ್ದು ನಿಪಿ-4 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಎರಡು ಭಾವಚಿತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಮ್ಮ ಮನೆಯ ಒಳಗೆ ಹಾಗು ಹೊರಗೆ ತೆಗೆದಿರುತ್ತಾರೆ. ಈಗ ಇನ್ನೊಂದು ಭಾವಚಿತ್ರ ನೋಡುತ್ತಿದು ಅದನ್ನು ಪೆದ್ದಮ್ಮವ್ವ ದೇವಸ್ಥಾನದ ಹತ್ತಿರ ತೆಗೆದಿದ್ದು, ಇನ್ನು ಎರಡು ಭಾವಚಿತ್ರಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ನನ್ನ ಮಗಳ ಶವದ ಮರಣೋತ್ತರ ಪರೀಕ್ಷೆ ಆಗುವ ಸಮಯದಲ್ಲಿ ತಲೆಗೆದಿರುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ-5 ರಿಂದ 9 ಎಂದು ಗುರುತಿಸಲಾಯಿತು.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಬಿ.ವಿ.ಬಿ ವಕೀಲರಿಂದಃ</u>

3 ರಿಂದ 5 ನೇ ಆರೋಪಿತರ ಪರ ವಕೀಲರು ಅವರ ಸಂಬಂಧಿಕರು ಮರಣ ಹೊಂದಿದ್ದಾರೆ ಅವರ ಅಂತ್ಯಕ್ರಿಯೆಗೆ ಹೋಗಬೇಕು ಆದ್ದರಿಂದ ಸಮಯ ನೀಡುವಂತೆ ಕೋರುತ್ತಾರೆ. ನ್ಯಾಯದಾನದ ದೃಷ್ಟಿಯಿಂದ ಸಮಯ ನೀಡಿ ಪಾಟೀ ಸವಾಲನ್ನು ಮುಂಡೂಡಲಾಯಿತು.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

C/c, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.